# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1112 |
| ಸದಸ್ಯರ ಹೆಸರು | : | ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ: | : | 22.12.2021 |
| ಉತ್ತರಿಸುವ ಸಚಿವರು | | ಮಾನ್ಯ ಪಶುಸಂಗೋಪನಾ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚೆಗೆ ಬೆಂಗಳೂರು ನಗರದ ಹೆಬ್ಬಾಳದಲ್ಲಿರುವ ಸರ್ಕಾರೇತರ ಪ್ರಾಣಿಗಳ ವಸತಿಗೃಹವಾದ "ಕರುಣಾ ಪ್ರಾಣಿ ಆಶ್ರಯ ಧಾಮ" ದ ವಿರುದ್ಧ ಅಕ್ರಮದಿಂದ ಹಣ ಸುಲಿಗೆಯ ಆರೋಪಗಳು ಕೇಳಿಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ. ಸರ್ಕಾರ ಕೈಗೊಂಡ ಕ್ರಮಗಳೇನು: | ಬಂದಿದೆ.<br><br>ಕರುಣಾ ಪ್ರಾಣಿ ಆಶ್ರಯ ಧಾಮ" ದ ವಿರುದ್ಧ ಬಂದಿರುವ ದೂರಿನ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸಲು ಬೀದರ್‌ನ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಶೀಘ್ರವಾಗಿ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ. |
| ಆ) | ಈ ಪ್ರಾಣಿ ಆಶ್ರಮಕ್ಕೆ ಪ್ರಾಣಿಗಳನ್ನು ಒಪ್ಪಿಸಲು ಮತ್ತು ಪ್ರಾಣಿಗಳನ್ನು ದತ್ತು ಪಡೆಯಲು ಬರುವ ಜನರಿಂದ ಈ ಸಂಸ್ಥೆಯವರು ಹಣ ವಸೂಲಿ ಮಾಡುತ್ತಿದ್ದಾರೆ ಎಂಬ ಆರೋಪಗಳು ಕೂಡ ಬಂದಿದ್ದು. ಇವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು: | |
| ಇ) | ಈ ಪ್ರಾಣಿ ಆಶ್ರಮದಲ್ಲಿ ಇರುವ ನಾಯಿಗಳನ್ನು ತಳಿಗಾರರಿಗೆ ಮಾರಾಟ ಮಾಡಲಾಗುತ್ತಿದೆ : ಹಾಗೂ ಅವುಗಳಿಗೆ ದಯಾ ಮರಣವನ್ನು ನೀಡಲಾಗುತ್ತಿದೆ ಎಂಬ ಆರೋಪಗಳಿದ್ದು, ಈ ಬಗ್ಗೆ ಆಶ್ರಮದ ಅಧ್ಯಕ್ಷರ ಮೇಲೆ ಪಶುಸಂಗೋಪನಾ ಇಲಾಖೆಯು ಕೈಗೊಂಡ ಕ್ರಮಗಳೇನು ? | |

ಸಂ: ಪಸಂಮೀ ಇ-328 ಸಲೆವಿ 2021

(ಪ್ರಭು. ಬಿ ಚವ್ಹಾಣ್)

ಪಶುಸಂಗೋಪನೆ ಸಚಿವರು